28 (73) ಶ್ರೀ ಸುನೀಲ್ ಕುಮಾರ್ ವಿ (ಕಾರ್ಕಳ) ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ರಾಜ್ಯ ಸರ್ಕಾರವು ಯಾವ ಯಾವ ಸಂಸ್ಥೆಗಳಿಂದ ಯಾವ ಯಾವ ಉದ್ದೇಶಗಳಿಗಾಗಿ ಕಳೆದ ಆರು ವರ್ಷಗಳಿಂದ ಎಷ್ಟೆಷ್ಟು ಸಾಲವನ್ನು ಪಡೆದುಕೊಂಡಿದೆ , ಸಂಸ್ಥೆವಾರು, ವರ್ಷವಾರು ವಿವರಗಳನ್ನು ಒದಗಿಸುವುದು,

ಆ) ಈ ಸಾಲಕ್ಕೆ ವಿಧಿಸಿರುವ ಬಡ್ಡಿ ಪ್ರಮಾಣ ಎಷ್ಟು ,

ಇ) ಈ ಪೈಕಿ ಎಷ್ಟು ಹಣವನ್ನು ಮರು ಪಾವತಿಸಲಾದ ಹಾಗೂ ಇನ್ನೂ ಬಾಕಿ ಇರುವ ಹಣ ಎಷ್ಟು , (ಸಂಸ್ಥೆಗಳವಾರು ಹಾಗೂ ವರ್ಷವಾರು ವಿವರ ನೀಡುವುದು) ,

ಈ) ಜನರಲ್ ಇನ್ಸುರೆನ್ಸ್, ಎಲ್ ಐ ಸಿ ಹಾಗೂ ನ್ಯಾಷನಲ್ ಕೋ-ಆಪರೇಟಿವ್ ಡೆವೆಲಪ್‌ಮೆಂಟ್ ಸಂಸ್ಥೆಯಿಂದ ಪಡೆದಿರುವ ಸಾಲವನ್ನು ರಾಜ್ಯ ಸರ್ಕಾರ ಮರು ಪಾವತಿಸಲು ತೀರ್ಮಾನಿಸಿದೆಯೇ ,

ಉ) ಹಾಗಿದ್ದಲ್ಲಿ, ಈ ಸಾಲವನ್ನು ಹಿಂತಿರುಗಿ ಪಡೆಯಲು ಸದರಿ ಸಂಸ್ಥೆಗಳು ಹಿಂದೇಟು ಹಾಕುತ್ತಿರಲು ಕಾರಣಗಳೇನು ,

ಊ) ಸರ್ಕಾರವು ಸದರಿ ಸಾಲವನ್ನು ವಾಪಸ್ಸು ಪಡೆಯುವಂತೆ ಕೋರಿದೆಯೇ ,

ಋ) ಹಾಗಿದ್ದಲ್ಲಿ, ಯಾವಾಗ ಕೋರಲಾಗಿತ್ತು ,

ಎ) ಇದಕ್ಕೆ ಆ ಸಂಸ್ಥೆಯ ಪ್ರತಿಕ್ರಿಯೆ ಏನು ,

ಏ) ಈ ಬಗ್ಗೆ ಕೇಂದ್ರ ಸರ್ಕಾರ ಮಧ್ಯ ಪ್ರವೇಶ ಮಾಡಿದೆಯೇ, ಮಧ್ಯ ಪ್ರವೇಶಿಸಿದ್ದಲ್ಲಿ ರಾಜ್ಯ ಸರ್ಕಾರದ ಕ್ರಮಗಳೇನು ?

ಶ್ರೀ ಬಿ ಎಸ್ ಯಡಿಯೂರಪ್ಪ (ಉಪ ಮುಖ್ಯಮಂತ್ರಿಗಳು)

ಅ) ರಾಜ್ಯ ಸರ್ಕಾರವು ಕಳೆದ ಆರು ವರ್ಷಗಳಿಂದ ಸಂಸ್ಥೆಗಳಿಂದ ಪಡೆದ ಸಾಲ ಮತ್ತು ಉದ್ದೇಶದ ವಿವರಗಳನ್ನು ಅನುಬಂಧ 'ಎ' ನಲ್ಲಿ ನೀಡಲಾಗಿದೆ

ಆ) ಸಂಸ್ಥೆಗಳಿಂದ ಪಡೆದ ಸಾಲಕ್ಕೆ ವಿಧಿಸಿರುವ ಬಡ್ಡಿ ಪ್ರಮಾಣದ ವಿವರಗಳನ್ನು ಅನುಬಂಧ 'ಬಿ' ನಲ್ಲಿ ನೀಡಲಾಗಿದೆ

ಇ) ಮರು ಪಾವತಿಸಿದ ಹಣ ಮತ್ತು ಇನ್ನೂ ಬಾಕಿ ಇರುವ ಹಣದ ವಿವರಗಳನ್ನು ಅನುಬಂಧ 'ಬಿ' ನಲ್ಲಿ ನೀಡಲಾಗಿದೆ

ಈ) ಪ್ರತಿ ಸಾಲದ ನಿಬಂಧನೆ ಮತ್ತು ಷರತ್ತುಗಳ ಆಧಾರದ ಮೇಲೆ ಸಾಲವನ್ನು ಮರುಪಾವತಿ ಮಾಡಲಾಗುತ್ತದೆ ಪ್ರತಿ ವರ್ಷವೂ ಸಾಲವನ್ನು ಮರುಪಾವತಿ ಮಾಡಲು ಆಯವ್ಯಯದಲ್ಲಿ ಸಾಕಷ್ಟು ಅವಕಾಶವನ್ನು ಮಾಡಲಾಗುತ್ತಿದೆ

ಉ) –– ಇಲ್ಲ ––

ಊ) ಸಾಲದ ಅವಧಿಪೂರ್ವ ಮರುಪಾವತಿಯನ್ನು ಒಪ್ಪುವಂತೆ ರಾಜ್ಯ ಸರ್ಕಾರವು ಕಾಲ ಕಾಲಕ್ಕೆ ಸಂಸ್ಥೆಗಳನ್ನು ಕೋರುತ್ತಿದೆ ಕೇವಲ ನಬಾರ್ಡ್ ಸಂಸ್ಥೆ ಮಾತ್ರ ಯಾವುದೇ ಪೂರ್ವ ಷರತ್ತುಗಳು ಇಲ್ಲದೆ ಸಾಲದ ಅವಧಿಪೂರ್ವ ಮರುಪಾವತಿಗೆ ಒಪ್ಪಿಗೆ ನೀಡಿರುತ್ತದೆ ಇತರೆ ಎಲ್ಲಾ ಸಂಸ್ಥೆಗಳು ಭವಿಷ್ಯದಲ್ಲಿ ಆಗಬಹುದಾದ ಬಡ್ಡಿ ನಷ್ಟ ಭರ್ತಿ ಮಾಡಿಕೊಡುವಂತೆ ರಜ್ಯ ಸರ್ಕಾರವನ್ನು ಕೋರಿವೆ

ಋ) ––,,––

ಎ) –– ,,––

ಏ) ಸಾಲದ ಅವಧಿಪೂರ್ವ ಮರುಪಾವತಿಯನ್ನು ಒಪ್ಪುವಂತೆ ಸಂಸ್ಥೆಗಳ ಮನವೊಲಿಸುವಂತೆ ಕೇಂದ್ರ ಸರ್ಕಾರವನ್ನು ಸಹ ಕೋರಲಾಗಿದೆ

ಅನುಬಂಧ 'ಎ'

ಕಳೆದ ಆರು ವರ್ಷಗಳಲ್ಲಿ ಸಂಸ್ಥೆಗಳಿಂದ ಪಡೆಯಲಾದ ಸಾಲ ಮತ್ತು ಉದ್ದೇಶದ ವಿವರಗಳು ಈ ಕೆಳಕಂಡಂತಿದೆ

(ರೂ ಲಕ್ಷಗಳಲ್ಲಿ)

ಸಂಸ್ಥೆಗಳು	2000–01 ಲೆಕ್ಕ	2001–02 ಲೆಕ್ಕ	2002–03 ಲೆಕ್ಕ
ಎಲ್ ಐ ಸಿ	16809 00	15999 00	0 00
ನಬಾರ್ಡ್	21253 94	18262 73	23946 54
ಎನ್ ಸಿ ಡಿ ಸಿ	1639 43	2228 52	6064 81
ಜಿ ಐ ಸಿ	2850 91	580 00	––
ಒಟ್ಟು	42553 28	37070 25	30011 35

(ರೂ ಲಕ್ಷಗಳಲ್ಲಿ)

ಸಂಸ್ಥೆಗಳು	2003–04 ಲೆಕ್ಕ	2004–05 ಲೆಕ್ಕ	2005–06 ಲೆಕ್ಕ
ಎಲ್ ಐ ಸಿ	14888 80	0 00	––
ನಬಾರ್ಡ್	29843 69	20862 26	10000 00

ಎನ್ ಸಿ ಡಿ ಸಿ	2110 32	6011 56	--
ಜಿ ಐ ಸಿ	--	--	--
ಒಟ್ಟು	46842 81	26873 82	10000 00

* ಎಲ್ ಐ ಸಿ ಸಾಲವನ್ನು ವಸತಿ ಯೋಜನೆಗಳಿಗೆ ಪಡೆಯಲಾಗಿದೆ

* ಜಿ ಐ ಸಿ ಸಾಲವನ್ನು ಅಗ್ನಿಶಾಮಕ ಉಪಕರಣಗಳ ಖರೀದಿಗೆ ಮತ್ತು ವಸತಿ ಯೋಜನೆಗಳಿಗೆ ಪಡೆಯಲಾಗಿದೆ

* ನಬಾರ್ಡ್ ಸಾಲವನ್ನು ಸಣ್ಣ ನೀರಾವರಿ, ಗ್ರಾಮೀಣ ರಸ್ತೆಗಳು ಮತ್ತು ಶಿಕ್ಷಣಕ್ಕೆ ಸಂಬಂಧಿಸಿದ ಯೋಜನೆಗಳಿಗೆ ಪಡೆಯಲಾಗಿದೆ

* ಎನ್ ಸಿ ಡಿ ಸಿ ಸಾಲವನ್ನು ಸಹಕಾರಿ ಸಂಸ್ಥೆಗಳಿಗೆ ಆರ್ಥಿಕ ನೆರವನ್ನು ನೀಡಲು ಪಡೆಯಲಾಗಿದೆ

ಅನುಬಂಧ 'ಬಿ'

ಸಂಸ್ಥೆಗಳಿಂದ ಪಡೆಯಲಾದ ಸಾಲದ ಮೇಲೆ ವಿಧಿಸಿರುವ ಬಡ್ಡಿಯ ದರ, ಮರು ಪಾವತಿ ಮಾಡಲಾದ ಹಣ ಮತ್ತು ಬಾಕಿ ಪಾವತಿಸಬೇಕಾದ ಹಣದ ವಿವರಗಳು ಈ ಕೆಳಕಂಡಂತಿರುತ್ತದೆ ,

ಬಡ್ಡಿಯ ದರ

ಎಲ್ ಐ ಸಿ	8 00 % – 13 40 %
ಜಿ ಐ ಸಿ	9 75 % – 13 00 %
ಎನ್ ಸಿ ಡಿ ಸಿ	9 00 % – 16 50 %
ನಬಾರ್ಡ್	7 00 % / 6 5 %

ಕಳೆದ ಮೂರು ವರ್ಷಗಳಲ್ಲಿ ಮರುಪಾವತಿ ಮಾಡಲಾದ ಸಾಲದ ವಿವರಗಳು ಈ ಕೆಳಕಂಡಂತಿವೆ

(ರೂ ಲಕ್ಷಗಳಲ್ಲಿ)

ಸಂಸ್ಥೆಗಳು	2002–03 ಲೆಕ್ಕ	2003–04 ಲೆಕ್ಕ	2004–05 ಲೆಕ್ಕ
ಎಲ್ ಐ ಸಿ	2961 61	2683 43	3477 87
ಜಿ ಐ ಸಿ	191 01	246 54	1122 09
ನಬಾರ್ಡ್	11181 17	53783 44	35113 39
ಎನ್ ಸಿ ಡಿ ಸಿ	4257 40	3723 44	4213 26
ಒಟ್ಟು	18590 39	60436 85	43926 61

ಮಹಾಲೇಖಪಾಲರ ಪ್ರಕಾರ ಸಂಸ್ಥೆಗಳಿಗೆ ಬಾಕಿ ಇರುವ ಹಣದ ವಿವರಗಳು ಈ ಕೆಳಕಂಡಂತಿರುತ್ತದೆ (ದಿನಾಂಕ 31–3–2005ರಂತೆ)

(ರೂ ಲಕ್ಷಗಳಲ್ಲಿ)

ಸಂಸ್ಥೆಗಳು	2002–03 ಲೆಕ್ಕ
ಎಲ್ ಐ ಸಿ	74766 78
ಜಿ ಐ ಸಿ	7789 64
ನಬಾರ್ಡ್	38902 26
ಎನ್ ಸಿ ಡಿ ಸಿ	7428 38
ಒಟ್ಟು	128887 06

29 (75) ಶ್ರೀ ಸುನೀಲ್ ಕುಮಾರ್ ವಿ (ಕಾರ್ಕಳ) ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ,

ಅ) ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳಿಗೆ ಸಬ್ಸಿಡಿ ಸೌಕರ್ಯವನ್ನು ಕಲ್ಪಿಸಿ ಕೊಡಲಾಗಿದೆಯೇ,

ಆ) ಹಾಗಿದ್ದಲ್ಲಿ, ಎಷ್ಟು ಕೈಗಾರಿಕೆಗಳಿಗೆ ಸಬ್ಸಿಡಿ ನೀಡಲಾಗುತ್ತಿದೆಯೇ (ಜಿಲ್ಲಾವಾರು ಮತ್ತು ತಾಲ್ಲೂಕುವಾರು ಅಂಕಿ ಅಂಶಗಳನ್ನು ನೀಡುವುದು) ,

ಇ) ಸಣ್ಣ ಕೈಗಾರಿಕೆಗಳಿಗೆ ಸಬ್ಸಿಡಿಯನ್ನು ಸರ್ಕಾರ ಯಾವ ಆಧಾರದ ಮೇಲೆ ನೀಡಲಾಗುತ್ತಿದೆ ?

ಶ್ರೀ ಶಿವಾನಂದ ಎಸ್ (ಸಣ್ಣ ಕೈಗಾರಿಕಾ ಸಚಿವರು)

ಅ) ಹೌದು

ಆ)1 1 99 ರಇಂದ 31 03 2006 ಅವಧಿಯಲ್ಲಿ 21656 ಘಟಕಗಳಿಗೆ ಸಹಾಯಧನ ಮಂಜೂರು ಮಾಡಲಾಗಿದೆ ಜಿಲ್ಲಾವಾರು ಮಾಹಿತಿ ಲಗತ್ತಿಸಿದೆ

ಇ) ಸಣ್ಣ ಕೈಗಾರಿಕೆಗಳಿಗೆ ಸಹಾಯಧನವನ್ನು ಚಾಲ್ತಿಯಲ್ಲಿರುವ ಕೈಗಾರಿಕಾ ನೀತಿಗಳಡಿಯಲ್ಲಿ ಘಟಕಗಳು ಹೂಡುವ ಸ್ಥಿರಾಸ್ತಿ ಬಂಡವಾಳದ ಮೇಲೆ ನಿಗದಿಪಡಿಸಿರುವ ಪ್ರಮಾಣದಂತೆ ವಲಯಗಳ ವರ್ಗೀಕರಣದ ಆಧಾರದಲ್ಲಿ ಮಂಜೂರು ಮಾಡಲಾಗುವುದು 2006–11ನೇ ಕೈಗಾರಿಕಾ ನೀತಿಯಲ್ಲಿ ಸಹಾಯಧನವು ವಲಯ–1 ಮತ್ತು 2 ರಲ್ಲಿ ಮಾತ್ರ ಲಭ್ಯವಿರುತ್ತದೆ ವಲಯ–1 ಶೇ 25 ರಂತೆ ಗರಿಷ್ಟ ಮಿತಿ ರೂ 15 00 ಲಕ್ಷ, ವಲಯ–2 ರಲ್ಲಿ ಶೇ 20 ರಂತೆ ಗರಿಷ್ಟ ಮಿತಿ 10 00 ಲಕ್ಷ, ಇದರ ಜೊತೆಗೆ